ಅತೀ ತುರ್ತು

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 06 ಡಿವಿಪಿ (1) 2015.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 08-06-2015.

**ಸುತ್ತೋಲೆ**

**ವಿಷಯ:** ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014

**ಉಲ್ಲೇಖ:**
1. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 60 ಶಾಸನ 2013, ದಿನಾಂಕ 12-02-2014
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 4 ಜಿಆರ್‌ಟಿ(2) 2014, ದಿನಾಂಕ 05-09-2014
3. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 07-05-2015
4. ಉಚ್ಚನ್ಯಾಯಾಲಯ ರಿಟ್ ಪಿಟಿಷನ್ ಸಂಖ್ಯೆ: 45487/2014
5. ಕರ್ನಾಟಕ ರಾಜ್ಯ ಅನುದಾನಿತ ಪಾಲಿಟೆಕ್ನಿಕ್ ನೌಕರರ ಸಂಘ (ರಿ), ಬೆಂಗಳೂರ ಇವರ ಮನವಿ ದಿನಾಂಕ 22-05-2015

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರನ್ವಯ ದಿನಾಂಕ 12-02-2014 ರಿಂದ ಜಾರಿಗೆ ಬಂದಿರುವ ಅಧಿಸೂಚನೆಯನ್ವಯ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನವನ್ನು ಆಯಾ ಹುದ್ದೆಗಳಿಗೆ ಸರ್ಕಾರವು ಅನುಮೋದನೆ ನೀಡಿ ಸಹಾಯಾನುದಾನ ಬಿಡುಗಡೆ ಮಾಡಿದ ದಿನಾಂಕದಿಂದ ನಿಗಧಿಪಡಿಸಬೇಕಾಗಿರುತ್ತದೆ ಎಂದು ಅನುದಾನರಹಿತ ಸೇವಾ ಅವಧಿಯನ್ನು ನಿವೃತ್ತಿ ವೇತನ ಒಳಗೊಂಡಂತೆ ಯಾವುದೇ ವೇತನ ನಿಗಧಿ, ವೇತನ ಬಡ್ತಿ, ಜೇಷ್ಠತೆ ಮತ್ತು ಇತರೆ ಸೇವಾ ಸೌಲಭ್ಯಗಳನ್ನು ಪರಿಗಣಿಸಬಾರದೆಂದು ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (2) ಮತ್ತು (3) ರ ಈ ಕಛೇರಿ ಸುತ್ತೋಲೆಗಳಲ್ಲಿ ರಾಜ್ಯದ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ತಮ್ಮ ಸಂಸ್ಥೆಯ ಸಿಬ್ಬಂದಿವರ್ಗದವರ ಸೇವಾ ಪುಸ್ತಕಗನ್ನು ಪರಿಶೀಲಿಸಿ, ಮೇಲೆ ತಿಳಿಸಿರುವಂತಹ ಪ್ರಕರಣಗಳು ಇದ್ದಲ್ಲಿ, ವೇತನವನ್ನು ಪುನರ್ ನಿಗಧಿಗೊಳಿಸಿ ವೇತನ ಬಿಲ್ಲುಗಳನ್ನು ಸಲ್ಲಿಸಲು ಈಗಾಗಲೇ ತಿಳಿಸಲಾಗಿತ್ತು.

ಉಲ್ಲೇಖ (4) ರಲ್ಲಿ ಉಚ್ಚನ್ಯಾಯಾಲಯವು "Interim order is granted in favour of the petitioners to continue to pay salaries / pension to the petitioners as was existing on the date of filling of the petition until further orders " ಎಂದು ಆದೇಶಿಸಿರುತ್ತದೆ.

ಉಲ್ಲೇಖ (5) ರಲ್ಲಿ ಕರ್ನಾಟಕ ರಾಜ್ಯ ಅನುದಾನಿತ ಪಾಲಿಟೆಕ್ನಿಕ್ ನೌಕರರ ಸಂಘ (ರಿ), ಬೆಂಗಳೂರ ಇವರು ದಿನಾಂಕ 22-05-2015 ರಂದು ಉಲ್ಲೇಖ (3) ರ ಸುತ್ತೋಲೆಯನ್ನು ಪ್ರಕಟಿಸಿರುವ ಬಗ್ಗೆ ಹಾಗೂ ಈಗಾಗಲೇ ಘನ ಉಚ್ಚ ನ್ಯಾಯಾಲಯವು ಯಾವುದೇ ವೇತನ

ಪುನರ್‌ನಿಗಧೀಕರಣ ಮಾಡದೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ನಿರ್ದೇಶಿಸಿ, ವೇತನ ಪುನರ್ ನಿಗಧೀಕರಣ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿದ್ದು, ಪ್ರಕರಣವು ನ್ಯಾಯಾಲಯದಲ್ಲಿ ಇತ್ಯಾರ್ಥಗೊಳ್ಳುವವರೆಗೆ ಯಾವುದೇ ವೇತನ ಪುನರ್‌ನಿಗಧೀಕರಣ ಮಾಡದಂತೆ ಆದೇಶಿಸಿರುವುದನ್ನು ಪರಿಗಣಿಸಲು ಮನವಿ ಸಲ್ಲಿಸಿರುತ್ತಾರೆ. ಇದರೊಂದಿಗೆ ಕರ್ನಾಟಕ ರಾಜ್ಯ ಸರ್ಕಾರವು ಸದನ ಸಮಿತಿಯನ್ನು ರಚಿಸಿ ವರದಿಯನ್ನು ಪಡೆದುಕೊಂಡಿದ್ದು, ಹೊರಟ್ಟಿ ವರದಿಯನ್ನು ಪರಿಶೀಲಿಸಿ ಜಾರಿಗೊಳಸುವ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಯವರು ನೀಡಿರುವುದಾಗಿ ತಿಳಸಿರುತ್ತಾರೆ. ಈ ಎರಡು ಪ್ರಕರಣಗಳನ್ನು ಪರಿಗಣಿಸಿ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥಗೊಳ್ಳುವವರೆಗೆ ಹಾಗೂ ಹೊರಟ್ಟಿವರದಿಯನ್ನು ಸರ್ಕಾರವು ಜಾರಿಗೊಳಸುವವರೆಗೆ ಅನುದಾನಿತ ಪಾಲಿಟೆಕ್ನಿಕ್ ವೇತನ ಪುನರ್‌ನಿಗಧೀಕರಣ ಮಾಡದಂತೆ ಕೋರಿರುತ್ತಾರೆ.

ಈ ದಿಸೆಯಲ್ಲಿ ಅನುದಾನಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಗೆ ಈ ಕೆಳಕಂಡಂತೆ ವೇತನ ಪಟ್ಟಿಯನ್ನು / ದಾಖಲೆಗಳನ್ನು ದೃಢೀಕರಿಸಿ ಕಳುಹಿಸಲು ಕೋರಲಾಗಿದೆ.

1) ತಮ್ಮ ಸಂಸ್ಥೆಯಲ್ಲಿ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ರ ವಿರುದ್ಧ ನ್ಯಾಯಾಲಯದಲ್ಲಿ ಧಾವೆ ಹೂಡಿರುವ ಅಧಿಕಾರಿ / ಸಿಬ್ಬಂದಿಗಳ ಹೆಸರು ಹಾಗೂ ನ್ಯಾಯಾಲಯದಲ್ಲಿ ಧಾವೆ ಹೂಡಿರುವ ಬಗ್ಗೆ ದಾಖಲೆ (ಪ್ರತಿ ಸಿಬ್ಬಂದಿ / ಅಧಿಕಾರಿಗಳ ದಾಖಲೆ ಪ್ರತ್ಯೇಕವಾಗಿ)
2) ನ್ಯಾಯಾಲಯದಲ್ಲಿ ಧಾವೆ ಹೂಡದಿರುವ ಅಧಿಕಾರಿ / ಸಿಬ್ಬಂದಿಗಳ ಹೆಸರು
3) ನ್ಯಾಯಾಲಯದಲ್ಲಿ ಧಾವೆ ಹೂಡಿರುವ ಅಧಿಕಾರಿ / ಸಿಬ್ಬಂದಿಗಳನ್ನು ಹೊರತು ಪಡಿಸಿದ ಉಳದ ಸಿಬ್ಬಂದಿಗಳಗೆ ವೇತನವನ್ನು ಮರುನಿಗಧಿಗೊಳಸಿ ವೇತನ ಬಿಲ್ ಅನ್ನು (ಏಪ್ರಿಲ್'15 ರ ಮಾಹೆಯಿಂದ) ಸಲ್ಲಿಸುವುದು.

ಮೇಲೆ ತಿಳಸಲಾದ ವಿವರವನ್ನು ಕೂಡಲೇ ನಿರ್ದೇಶನಾಲಯಕ್ಕೆ ಕಳುಹಿಸಲು ಹಾಗೂ ಸಾಫ್ಟ್ ಕಾಪಿಯನ್ನು dte.dvp1@gmail.com ಗೆ ಇ-ಮೇಲ್ ಮಾಡಲು ಈ ಮೂಲಕ ತಿಳಸಲಾಗಿದೆ.

ನಿರ್ದೇಶಕರು.
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಇವರಿಗೆ:
1. ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಗೆ
2. ಲೆಕ್ಕಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
3. ಇಎಸ್‌ಟಿ (4)ಬಿ ವಿಭಾಗ, ನಿರ್ದೇಶನಾಲಯ, ಬೆಂಗಳೂರು